# ‘ಭಗವಂತನ ಸಾಮಿಪ್ಯದಿಂದ ಮರಣ ಭಯ ದೂರ’

ಪ್ರಜಾವಾಣಿ ವಾರ್ತೆ

ಶಿರಸಿ: ಭಗವಂತನಿಗೆ ಸಾವಿಲ್ಲ ಹಾಗಾಗಿ ಅವನ ಸಾಮಿಪ್ಯ ಸಾಧಿಸುವ ಕೆಲಸ ಪ್ರತಿಯೊಬ್ಬನಿಂದ ಆಗಬೇಕು ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ನುಡಿದರು.

ಸ್ವರ್ಣವಲ್ಲೀ ಮಠದಲ್ಲಿ ಸಂಕಲ್ಪಿತ ಚಾತುರ್ಮಾಸ್ಯ ವ್ರತಾಚರಣೆಯ ಹಿನ್ನೆಲೆಯಲ್ಲಿ ಶುಕ್ರವಾರ ಸೋಂದಾ ಕಸಬಾ ಸೀಮೆಯ ಶಿಷ್ಯರು ಸಲ್ಲಿಸಿದ ಸೇವೆ ಸ್ವೀಕರಿಸಿ ಆಶೀರ್ವಚನ ನೀಡಿದರು.

ನಾವೆಲ್ಲ ಮರಣವುಳ್ಳ ಶರೀರದಲ್ಲಿ ಸಿಲುಕಿಕೊಂಡು ಕಷ್ಟ ಪಡುತ್ತಿದ್ದೇವೆ. ಮರಣ, ಮಹಾ ರೋಗ ಹಾಗೂ ವೃದ್ಧಾಪ್ಯಕ್ಕೆ ಹೆದರುತ್ತೇವೆ. ಅದಕ್ಕೆ ಕಾರಣ, ಮರಣದ ಶರೀರಕ್ಕೆ ಗಂಟು ಬೀಳುತ್ತಿದ್ದೇವೆ ಎಂಬುದಾಗಿದೆ. ಮರಣವೇ ಇಲ್ಲದ ದೇವರನ್ನು ಪಡೆಯಲು ಇಚ್ಛಿಸಿದರೆ ಲೌಕಿಕದ ಈ ಶರೀರದಿಂದ ಮುಕ್ತಿ ಪಡೆಯಲು ಸಾಧ್ಯವಿದೆ ಎಂದರು.

ಗೀತಾಚಾರ್ಯ ಶ್ರೀಕೃಷ್ಣ ಕರುಣಿಸಿದ ಭಗವದ್ಗೀತೆಯ ಸಾರ ಅರಿಯಬೇಕು. ಮರಣ, ಮುಪ್ಪು, ಅನಾರೋಗ್ಯಕ್ಕೆ ಹೆದರಿ ತಪ್ಪಿಸಿಕೊಳ್ಳುತ್ತೇವೆ. ಆದರೆ, ಭಯ ಪರಿಹಾರ ಮಾಡಿಕೊಳ್ಳುವ ದಾರಿ ನೋಡುವುದಿಲ್ಲ. ಆ ಭಯ ನಿವಾರಿಸಿ ಮರಣ ಇಲ್ಲದ ಶರೀರ ಹೊಂದಿದ ಭಗವಂತನ ದರ್ಶನದ ದಾರಿ ಗೀತೆ ಹೇಳುತ್ತದೆ. ಈ ಬಂಧನ ಬಿಡಿಸಿ ಕೊಳ್ಳುವ ಸೂಕ್ಷ್ಮ ಉಪಾಯವನ್ನು ಗೀತೆ ಹೇಳುತ್ತದೆ ಎಂದು ನುಡಿದರು.

ಆರ್.ಎಸ್.ಹೆಗಡೆ ಭೈರುಂಬೆ, ಬಾಲಚಂದ್ರ ಶಾಸ್ತ್ರಿ, ಚಿನ್ಮಯ ಜೋಶಿ, ವೆಂಕಟರಮಣ ಹೆಗಡೆ ವಾಜಗದ್ದೆಮ ಇದ್ದರು.



ಶಿರಸಿಯ ಸ್ವರ್ಣವಲ್ಲೀ ಮಠದಲ್ಲಿ ಸಂಕಲ್ಪಿತ ಚಾತುರ್ಮಾಸ್ಯ ವ್ರತಾಚರಣೆಯ ಹಿನ್ನೆಲೆಯಲ್ಲಿ ಸೋಂದಾ ಕಸಬಾ ಸೀಮೆಯ ಶಿಷ್ಯರಿಗೆ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಮಂತ್ರಾಕ್ಷತೆ ನೀಡಿದರು